# ChatGPT ಇಂಕಾಗ್ನಿಟೊ ಮೋಡ್ ಆನ್




## ಅನನ್ಯ ಚಾಟ್‌ಜಿಪಿಟಿಗೆ ಕಡಿವಾಣ

ಲೋಕದೆಲ್ಲೆಡೆ ಮಿಂಚಿನ ಸಂಚಲನ ಸೃಷ್ಟಿಸುತ್ತಿರುವ 'ಚಾಟ್‌ಜಿಪಿಟಿ' ಚಾಟ್‌ಬಾಟ್‌ಗೆ ಮಿತಿ ಹೇರುವ ದೃಷ್ಟಿಯಿಂದ ಓಪನ್‌ಎಐ ಸಂಸ್ಥೆಯು 'ಇಂಕಾಗ್ನಿಟೊ ಮೋಡ್' ಪರಿಚಯಿಸಿದೆ.

ಚಾಟ್‌ಜಿಪಿಟಿ ಕಾರ್ಯನಿರ್ವಹಣೆಯು ವಿಶ್ವದ ಹಲವು ದೇಶಗಳಲ್ಲಿ ಕಾನೂನಾತ್ಮಕ ತೊಡಕಿಗೆ ಕಾರಣವಾಗಿತ್ತು. ಇದೇ ಕಾರಣಕ್ಕೆ ಕೆಲ ದೇಶಗಳೂ ಚಾಟ್‌ಜಿಪಿಟಿಗೆ ನಿಷೇಧ ಹೇರಿದ್ದವು. ಸಂಭಾವ್ಯ ಗೋಪ್ಯತೆ ಉಲ್ಲಂಘನೆಯ ಕಾರಣಕ್ಕೆ ಕಳೆದ ತಿಂಗಳು ಚಾಟ್‌ಜಿಪಿಟಿಯನ್ನು ಇಟಲಿಯಲ್ಲಿ ನಿಷೇಧಿಸಲಾಗಿತ್ತು. ಇದರ ನಂತರ ಫ್ರಾನ್ಸ್ ಮತ್ತು ಸ್ಪೇನ್ ದೇಶಗಳು ಕೂಡ ಇದರ ಸೇವೆಯ ಇತಿಮಿತಿಯನ್ನು ತನಿಖೆ ಮಾಡಲು ಪ್ರಾರಂಭಿಸಿದ್ದವು.

ನಿಯಂತ್ರಣ ಮೀರಿ ಕಾರ್ಯನಿರ್ವಹಿಸುತ್ತಿದ್ದ ಚಾಟ್‌ಜಿಪಿಟಿಗೆ ಕಡಿವಾಣ ಹಾಕುವ ಸಲುವಾಗಿ ಮಾತೃಸಂಸ್ಥೆಯಾದ ಓಪನ್‌ಎಐ ಕಂಪನಿಯು ಇಂಕಾಗ್ನಿಟೊ ಮೋಡ್ ಬಿಡುಗಡೆ ಮಾಡಿದ್ದು, ಇದು ಚಾಟ್‌ಜಿಪಿಟಿ ಬಳಕೆದಾರರ ಸಂಭಾಷಣೆಯ ಹಿಸ್ಟರಿಯ ಮೇಲೆ ನಿಗಾವಹಿಸಿ ಅದನ್ನು ಡಿಲೀಟ್ ಮಾಡುತ್ತದೆ. ಜೊತೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸುಧಾರಣೆಗೆ ಇದು ನೆರವಾಗಲಿದೆ.

ಚಾಟ್‌ಜಿಪಿಟಿಯಲ್ಲಿ ತೊಡಗುವ ಬಳಕೆದಾರರ ಡೇಟಾ ಸಂಗ್ರಹಣೆಯಿಂದ ಹೊರಗುಳಿಯುವ ಹಕ್ಕನ್ನು ಬಳಕೆದಾರರಿಗೆ ನೀಡುವ ಮೂಲಕ ಸೇವೆಯನ್ನು ಪುನರಾರಂಭಿಸಬಹುದು ಎಂದು ಕಂಪನಿಗೆ ಹಲವು ದೇಶಗಳು ಸೂಚ್ಯವಾಗಿ ತಿಳಿಸಿದ್ದವು. ಇದಾದ ನಂತರ ಇಂಕಾಗ್ನಿಟೊ ಮೋಡ್ ಅಭಿವೃದ್ಧಿಪಡಿಸಲಾಗಿದೆ. ಚಾಟ್‌ಜಿಪಿಟಿ ಬಳಕೆಗೆ ಹೆಚ್ಚುವರಿ ಡೇಟಾ ನಿಯಂತ್ರಣಗಳೊಂದಿಗೆ 'ಚಾಟ್‌ಜಿಪಿಟಿ ಬಿಸಿನೆಸ್' ಚಂದಾದಾರಿಕೆಯನ್ನು ಸಹ ಆರಂಭಿಸಲು ಕಂಪನಿ ಮುಂದಾಗಿದೆ ಎನ್ನಲಾಗಿದೆ.

ಕಂಪನಿಯ ಮುಖ್ಯ ತಂತ್ರಜ್ಞಾನ ಅಧಿಕಾರಿ ಮೀರಾ ಮೂರ್ತಿ, 'ಇಟಲಿಯಲ್ಲಿ ಚಾಟ್‌ಜಿಪಿಟಿ ನಿಷೇಧದ ಬಳಿಕ ಈ ಹೊಸ ಫೀಚರ್ ಅಭಿವೃದ್ಧಿಪಡಿಸಿಲ್ಲ. ಕಂಪನಿಯು ಯೂರೋಪಿಯನ್ ಗೌಪ್ಯತೆ ಕಾನೂನಿಗೆ ಅನುಸಾರವಾಗಿಯೇ ರೂಪಿಸಲಾಗಿದೆ' ಎಂದಿದ್ದಾರೆ. ■

## ಟ್ವಿಟರ್‌ನಲ್ಲೂ ವಿಡಿಯೊ, ಧ್ವನಿ ಕರೆ



ಹೊಸ ಸಿಇಒ ನೇಮಕವಾದ ಬೆನ್ನಲ್ಲೇ, ತನ್ನ ವೇದಿಕೆಯಲ್ಲಿ ಹೊಸ ಫೀಚರ್‌ಗಳನ್ನು ಪರಿಚಯಿಸಲು ಸಜ್ಜಾಗಿದೆ ಟ್ವಿಟರ್. ಈ ಪೈಕಿ, ಟ್ವಿಟರ್ ವಿಡಿಯೊ ಕರೆ ಹಾಗೂ ವಾಯ್ಸ್ ಕರೆ ಫೀಚರ್ ನಿರೀಕ್ಷೆ ಹುಟ್ಟಿಸಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಟ್ವಿಟರ್ ಒಡೆಯ ಎಲಾನ್ ಮಸ್ಕ್, 'ಟ್ವಿಟರ್ ಹ್ಯಾಂಡಲ್ ಹೊಂದಿರುವ ಖಾತೆದಾರರು ಮೊಬೈಲ್ ನಂಬರ್ ಇಲ್ಲದೆಯೆ ವಿಶ್ವದ ಯಾವುದೇ ಪ್ರದೇಶಗಳಿಗೆ ಆ್ಯಪ್ ಮೂಲಕ ವಾಯ್ಸ್ ಹಾಗೂ ವಿಡಿಯೊ ಕರೆಗಳನ್ನು ಮಾಡಬಹುದು' ಎಂದಿದ್ದಾರೆ. ಈ ಮೂಲಕ ಇತರ ಸಾಮಾಜಿಕ ಮಾಧ್ಯಮಗಳಾದ ವಾಟ್ಸ್‌ಆ್ಯಪ್, ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂಗೆ ಸರಿ ಸಮಾನವಾಗಿ ಸೆಡ್ಡು ಹೊಡೆಯುವ ಫೀಚರ್‌ಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಟ್ವಿಟರ್ ಮುಂದಾಗಿದೆ.

ಎನ್‌ಕ್ರಿಪ್ಟ್ ಮಾಡಿದ ನೇರ ಸಂದೇಶಗಳ ರವಾನೆಯ ಆವೃತ್ತಿಯನ್ನೂ ಕಲ್ಪಿಸಲಾಗಿದೆ. ಸಂದೇಶಗಳನ್ನು ಎನ್‌ಕ್ರಿಪ್ಟ್ ಮಾಡಿದಂತೆ ವಿಡಿಯೊ ಹಾಗೂ ಧ್ವನಿ ಕರೆಗಳನ್ನು ಮಾಡಲಾಗುತ್ತದೆಯೇ ಎಂಬುದರ ಬಗ್ಗೆ ಸ್ಪಷ್ಟನೆ ಸಿಕ್ಕಿಲ್ಲ. ಹಲವು ವರ್ಷಗಳಿಂದ ನಿಷ್ಕ್ರಿಯವಾಗಿರುವ ಖಾತೆಗಳನ್ನು ಡಿಲೀಟ್ ಮಾಡುವ ಗೂಗಲ್ ಕಂಪನಿಯ ಈಚೆಗಿನ ನಿರ್ಧಾರದಂತೆ, ಟ್ವಿಟರ್ ಸಹ ಖಾತೆ ಡಿಲೀಟ್‌ಗೆ ಕೈಹಾಕಲಿದೆ. ಖಾತೆ ರದ್ದುಗೊಳ್ಳುವುದನ್ನು ತಡೆಯಲು ಬಳಕೆದಾರರು ಕನಿಷ್ಠ 30 ದಿನಗಳಿಗೊಮ್ಮೆ ತಮ್ಮ ಖಾತೆಗೆ ಲಾಗ್ ಇನ್ ಮಾಡಬೇಕಿದೆ.

'ಮೊಬೈಲ್ ಸಂಖ್ಯೆ ಇಲ್ಲದೆ ಟ್ವಿಟರ್ ಹೇಗೆ ವಿಡಿಯೊ ಹಾಗೂ ಧ್ವನಿ ಕರೆ ಸೌಲಭ್ಯ ಕಲ್ಪಿಸುತ್ತದೆ' ಎಂಬುದರ ಬಗ್ಗೆ ಮಾಹಿತಿಯು ಬಹಿರಂಗವಾಗಿಲ್ಲವಾದರೂ ಬಳಕೆದಾರರಲ್ಲಿ ಇದು ಹೇಗೆ ಸಾಧ್ಯವೆಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ. ■